C.C.395_2016_CHARGE

## ಎರಡನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಮದ್ದೂರು

**ಸಿ.ಸಿ. ಸಂಖ್ಯೆ 395/2016**

ಫಿರ್ಯಾದು: ಮದ್ದೂರು ಪೋಲೀಸರು

ವಿರುದ್ಧ

ಆರೋಪಿಃ

1. ನೇತ್ರಾವತಿ ಕೋಂ ಎನ್.ಹೆಚ್.ಹರೀಶ, 35 ವರ್ಷ, ನಂ. 415, ಲೀಲಾವತಿ ಬಡಾವಣೆ, ವಾಟರ್ ಟ್ಯಾಂಕ್ ರೋಡ್, ಮದ್ದೂರು ತಾಲ್ಲೂಕು.
2. ರಾಜು.ಜೆ.ಕೆ. ಬಿನ್ ಕಂಡಯ್ಯ, 50 ವರ್ಷ, ಕೆ.ಹೆಚ್.ನಗರ, 1 ನೇ ವಾರ್ಡ್, ಮದ್ದೂರು ತಾಲ್ಲೂಕು.
3. ಶಿವಮ್ಮ ಬಿನ್ ಹೊನ್ನಗಿರಿಯಯ್ಯ, 64 ವರ್ಷ, ನಂ. 415, ಲೀಲಾವತಿ ಬಡಾವಣೆ, ವಾಟರ್ ಟ್ಯಾಂಕ್ ರೋಡ್, ಮದ್ದೂರು ತಾಲ್ಲೂಕು. (ಮರಣಹೊಂದಿರುತ್ತಾರೆ)
4. ಜಗದೀಶ.ಎಸ್.ಎ, ಬಿನ್ ಲೇಟ್ ಎಸ್.ಎಲ್,ಅಪ್ಪಜಯ್ಯ, 57 ವರ್ಷ, ಮಸ್ತಮನ ಬೀದಿ, ಶಿವಪುರ, ಮದ್ದೂರು ತಾಲ್ಲೂಕು. (ಮರಣಹೊಂದಿರುತ್ತಾರೆ)

### ದೋಷಾರೋಪಣೆ

ಶ್ರೀ ಆದಿತ್ಯ.ಆರ್.ಕಲಾಲ್ ಬಿ.ಎ.ಎಲ್., ಎಲ್‌ಎಲ್.ಎಂ., ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಮದ್ದೂರು ಆದ ನಾನು ಆರೋಪಿಯಾದ ನಿಮ್ಮನ್ನು ಈ ಕೆಳಕಂಡಂತೆ ದೋಷಾರೋಪಣೆಗೆ ಗುರಿಪಡಿಸುತ್ತಿದ್ದೇನೆಃ

1, 2 ಮತ್ತು 4 ನೇ ಆರೋಪಿಗಳಾದ ನೀವು ದಿಃ 21-05-2011 ರ ರಾತ್ರಿ 10-00 ಗಂಟೆ ಸಮಯದಲ್ಲಿ ಮದ್ದೂರು ಠಾಣಾ ಸರಹದ್ದಿಗೆ ಸೇರಿದ ಶಿವಪುರ ಗ್ರಾಮದಲ್ಲಿ 1 ಮತ್ತು 2 ನೇ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ, 1 ನೇ ಆರೋಪಿಯಾದ ನೀವು ನಿಮ್ಮ ಗಂಡ ಹರೀಶ್ರವರು ಕಾರ್ ನಂ.ಕೆಎ-11-ಎಂ-2829 ನ ಅಪಘಾತದಿಂದ ಮೃತಪಟ್ಟಿಲ್ಲದೆ ಇದ್ದರೂ ನಿಮ್ಮಗೆ ಆ ವಿಷಯ ಗೊತ್ತಿದ್ದರೂ ಸಹ ಕಾರ್ ನಂ.ಕೆಎ-11-ಎಂ-2829 ವಾಹನದ ವಿಮೆ ಪಾಲಿಸಿಯಿಂದ ಅಕ್ರಮವಾಗಿ

C.C.395_2016_CHARGE

ಹಣ ಪಡೆದುಕೊಳ್ಳುವ ಸಲುವಾಗಿ ಸುಳ್ಳು ಪಿರ್ಯಾದನ್ನು ದಾಖಲಿಸಿ ಮತ್ತು 2 ನೇ ಆರೋಪಿಯಾದ ನೀವು ಸದರಿ ಕಾರಿನ ಪವರ್ ಆಫ್ ಅರ್ಟಾನಿ ಹೋಲ್ಡರ್ ಎಂದು ಸುಳ್ಳು ಪವರ್ ಆಫ್ ಅರ್ಟಾನಿ ಹೋಲ್ಡರ್ನ್ನು ಹಾಜರು ಪಡಿಸಿ ಸದರಿ ಕಾರನ್ನು ನ್ಯಾಯಾಲಯದ ಅನುಮತಿ ಪಡೆದು ಸದರಿ ಕಾರನ್ನು ನಿಮ್ಮ ವಶಕ್ಕೆ ಬಿಡುಗಡೆ ಮಾಡಿಸಿಕೊಂಡಿದ್ದೀರಿ ಮತ್ತು ವಿಮಾ ಕಂಪನಿಗೆ ಹಾಗೂ ನ್ಯಾಯಾಲಯಕ್ಕೆ ಮೋಸ ಎಸಗಿದ್ದೀರಿ ಎಂದು ಈ ನ್ಯಾಯಾಲಯದ ಸಂಜ್ಞಾನದೊಳಗೆ ಬರುವ ಭಾ.ದಂ.ಸಂ.ಕಲಂ 420 ಸಹವಾಚ 34 ರನ್ವಯ ಶಿಕ್ಷಾರ್ಹ ಅಪರಾಧ ಮಾಡಿದ್ದೀರಾ ಅಂತ ದೋಷಾರೋಪಣೆ ಮಾಡುತ್ತಿದ್ದೇನೆ.

2. ಎರಡನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ಮತ್ತು 2 ನೇ ಆರೋಪಿಯಾದ ನೀವು ಸಮಾನ ಉದ್ದೇಶದಿಂದ, 2 ನೇ ಆರೋಪಿಯಾದ ನೀವು ನ್ಯಾಯಾಲಯಕ್ಕೂ ಹಾಗೂ ನ್ಯಾಷನಲ್ ಇಂಡಿಯನ್ ಇನ್ಶೂರೆನ್ಸ್ ಕಂಪನಿಗೂ ಸುಳ್ಳು ಮಾಹಿತಿ ನೀಡಿ ತಾವು ನೀಡಿರುವ ಮಾಹಿತಿ ಸುಳ್ಳು ಎಂದು ಗೊತ್ತಿದ್ದರೂ ಸಹ ಅಕ್ರಮವಾಗಿ ಲಾಭ ಪಡೆಯುವ ಉದ್ದೇಶದಿಂದ ಹಾಗೂ 2ನೇ ಆರೋಪಿಯಾದ ನೀವು ಮೇಲೆ ಹೇಳಿಂದ ಕಾರಿನ್ನು ನಿಮ್ಮ ವಶಕ್ಕೆ ಪಡೆಯುವ ಸಲುವಾಗಿ ಸುಳ್ಳು ಪವರ್ ಆಫ್ ಅರ್ಟಾನಿಯನ್ನು ಹಾಜರು ಮಾಡಿ ಅದು ಸುಳ್ಳೆಂದು ನಿಮಗೆ ಗೊತ್ತಿದ್ದರೂ ಸಹ ನೈಜವಾದದೆಂದು ಬಿಂಬಿಸಿ ನ್ಯಾಯಾಲಯಕ್ಕೆ ಸುಳ್ಳು ಮಾಹಿತಿ ಒದಗಿಸಿರುವುದು ಭಾ.ದಂ.ಸಂ.ಕಲಂ 177 ಸಹವಾಚ 34 ರನ್ವಯ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾಧ ಮಾಡಿದ್ದೀರಾ ಅಂತ ದೋಷಾರೋಪಣೆ ಮಾಡುತ್ತಿದ್ದೇನೆ.

(ಮೇಲಿನ ದೋಷಾರೋಪಣೆಯನ್ನು ಆರೋಪಿತರಿಗೆ ತಿಳಿಯುವ ಕನ್ನಡ ಭಾಷೆಯಲ್ಲಿ ದಿ:01-08-2019 [handwritten: 31-7] ರಂದು ಓದಿ ಹೇಳಿ ಅವರ ಉತ್ತರವನ್ನು ಯತಾವತ್ತಾಗಿ ಬರೆದುಕೊಂಡಿದೆ.)

[signature] 31/7/19

(ಆದಿತ್ಯ.ಆರ್.ಕಲಾಲ್)
**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ**
**ಮದ್ದೂರು**